ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಒಂದು ಡ್ರೋಣ್ ಕ್ಯಾಮೆರಾ ಕಥೆ

ಏನಾಯಿತೋ ಏನೋ? ಗೊತ್ತಿಲ್ಲ ಡ್ರೋಣ್ ಕ್ಯಾಮೆರಾದ ರೆಕ್ಕೆಗಳು ಒಮ್ಮೆಗೇ ಕೈ ಕೊಟ್ಟವು. ಕೆಟ್ಟು ಹೋದ ಅದನ್ನು ರಿಪೇರಿ ಮಾಡುವ ನೈಪುಣ್ಯತೆ ನಮ್ಮಲ್ಲಿ ಯಾರಿಗೂ ಇರಲಿಲ್ಲ. ಲಟಪಟ ಎಂದು ತಿರುಗಿಸಿ ನೋಡಿದ ಪುಷ್ಪ ಅದರ ಒಂದು ಬದಿ ಮುರಿದು ಹಾಕಿದ. ನಂತರ ಸಿಡಿಮಿಡಿಗುಟ್ಟುತ್ತಾ, ಕಾರಿನ ಹಿಂದಿನ ಸೀಟಿನಲ್ಲಿ ಕೂತಿದ್ದ ಅವನು ಅದನ್ನು ರಿಪೇರಿ ಮಾಡುತ್ತಲೇ ಇದ್ದ. ಆಗಾಗ ಕಾರಿನ ಕಿಟಕಿ ಹೊರಗೆ ಡ್ರೋಣ್ ಹಿಡಿದು ವಿಡಿಯೋ ರೇಕಾರ್ಡಿಂಗ್ ಆಗುತ್ತಿದೆಯೇ ಎಂದು ಪರೀಕ್ಷಿಸುತ್ತಿದ್ದ...



ಮೈಸೂರಿನ ಗೆಳೆಯ ಉಮೇಶ್ ಕೊಟ್ಟ ಪರಿಚಯಸ್ತರ ಮನೆ ನಮಗೆ ವಾಲ್ಪರೈನಲ್ಲಿ ಎರಡು ದಿನದ ವಾಸ ಸ್ಥಳವಾಗಿತ್ತು. ಲೋಕೇಶ್ ಮೊಸಳೆ ಮತ್ತು ಪುಷ್ಪರಾಜ ಅವರ ಜೊತೆ ಹೋಗಿದ್ದೆ. ಮೂನಾರಿನ ಬೆಟ್ಟ ಇಳಿದು ವಾಲ್ಪರೈ ಏರುದಾರಿ ಹಿಡಿದಾಗ ಕತ್ತಲಾಗುತ್ತಿತ್ತು. ಇಲ್ಲಿನ ಎಡಬಿಡದೆ ಸುರಿಯುವ ಮಳೆ, ಧಂಡಿಯಾಗಿ ಕವುಚಿದ ಮಂಜಿನ ಮಧ್ಯೆ ಕಾರು ಓಡಿಸುವುದು ತೀರಾ ಕಷ್ಟ. ಅಲ್ಲಿನ ರಸ್ತೆ ತಿರುವುಗಳಂತೂ ಅಬ್ಬಬ್ಬ ಭಯ ಹುಟ್ಟಿಸುವಂತವು. ಒಂದು ತಿರುವು ಮುಗಿಸಿದ ಕ್ಷಣವೇ ಮತ್ತೊಂದು ಪ್ರತ್ಯಕ್ಷ. ಯಾರಿಗೂ ಅವಕಾಶ ಕೊಡದೆ ಹಠಮಾರಿಯಂತೆ ಕಾರು ಓಡಿಸುವ ನನ್ನ ದುಶ್ಚಟವೂ ಅಂದು ಸೋತು ಹೋಯಿತು. ದಾರಿ ವಿಭಜಕವಾದ ಕಡೆ ನಿಂತು ವಿಳಾಸ ಕೇಳಲು ನರಪಿಳ್ಳೆಯೂ ಗತಿಯಿಲ್ಲದ ಅನಾಥ ಜಾಗವದು. ಗೂಗಲ್ ಮ್ಯಾಪ್ ಕೂಡ ಸಿಗ್ನಲ್ ಸಿಗದೆ ಸತಾಯಿಸತೊಡಗಿತ್ತು. ಹುಂಬು ಧೈರ್ಯ ಮುಂದುವರೆಸಿ ಅಂತೂ ಮನೆ ಮುಟ್ಟುವಾಗ ತಡ ರಾತ್ರಿ. ನಮಗಾಗಿ ವೇದಾ ಬೋಪಣ್ಣ ಮತ್ತವರ ಗಂಡ ಪ್ರಗತ್ ಚಿಟ್ಟಿಯಪ್ಪ ಊಟ ರೆಡಿ ಮಾಡಿಕೊಂಡು ಕಾಯುತ್ತಿದ್ದರು.

ಪ್ರಗತ್ ಚಿಟ್ಟಿಯಪ್ಪ ಬೊಂಬಾಯಿ ಬರ್ಮಾ ಟ್ರೇಡಿಂಗ್ ಕಂಪನಿಗೆ ಸೇರಿದ ಸುಮಾರು ಐದಾರು ಸಾವಿರ ಎಕರೆಯ ಟೀ ಎಸ್ಟೇಟ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಅವರ ಬಂಗಲೆಯ ಮನೆ ಬೆಟ್ಟದ ಮೇಲಿತ್ತು. ಬ್ರಿಟೀಷರ ಕಾಲದ ನೂರಾರು ವರ್ಷ ಹಳೆಯ ಆ ದೈತ್ಯ ಮನೆ ಸೊಗಸಾಗಿತ್ತು. ರಾತ್ರಿ ಹೊತ್ತು ಕಾಡಿನ ಆನೆಗಳು, ಕಾಡುಕೋಣಗಳು ಮನೆಯ ಹತ್ತಿರವೇ ಬಂದು ಲದ್ದಿಹಾಕಿ ಹೋಗಿದ್ದವು. ನೂರಾರು ವರ್ಷಗಳಿಂದ ನಿರಾಂತಕವಾಗಿ ಓಡಾಡಿಕೊಂಡಿದ್ದ ಈ ಕಾಡು ಪ್ರಾಣಿಗಳ ಚಿರಾಸ್ತಿ. ಮನುಷ್ಯರು ಬಂದು ಕಾಡು ಬೋಳಿಸಿ ಟೀ ಎಸ್ಟೇಟ್ ಮಾಡಿಕೊಂಡ ಮೇಲೂ ಇವು ಮಾತ್ರ ತಮ್ಮ ಹಳೆಯ ಪಥವನ್ನು ಮರೆತಿರಲಿಲ್ಲ. ಸುತ್ತಲೂ ಕಾಡು ಕಿರಿದಾಗಿ ಅವುಗಳು ಓಡಾಡುವ ಜಾಗವೇ ಲುಪ್ತವಾಗಿತ್ತು.